**ದಿನಾಂಕಃ 25.10.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರಿಂದಃ**

1. ನಾನು ಅ ದಿನ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಹಲೀಮ್ ಎನ್ನುವವರು ಮಾಲೀಕರಾಗಿದ್ದರು. ಸದರಿ ದ್ವಿಚಕ್ರ ವಾಹನದ ಅರ್ ಸಿ ಹಾಗೂ ವಿಮೆಯ ದಾಖಲೆಯನ್ನು ಅವರ ಬಳಿ ಕೇಳಬೇಕಾಗುತ್ತದೆ. ನಾನು ಕೆಲಸಕ್ಕೆ ಹೋದಾಗ ದ್ವಿಚಕ್ರ ವಾಹನವನ್ನು ಬಳಸುತ್ತೇನೆ. ಅಪಘಾತವಾಯಿತು ಎಂದು ಹೇಳುವ ದಿನದಂದು ನಾನು ಹೋಟೇಲ್ ಗೆ ಮಾಂಸವನ್ನು ಕೊಡಲು ಹೋಗುತ್ತಿದ್ದೇನು. ಅಪಘಾತ ಸ್ಥಳದಲ್ಲಿ ವಾಹನ ಸಂಚಾರ ಹೆಚ್ಚಿಗೆ ಇರುತ್ತದೆ. ಅಪಘಾತವಾದ ರಸ್ತೆಯ ಮಧ್ಯದಲ್ಲಿ ಡಿವೈಡರ್ ಇರುವುದಿಲ್ಲ. ಸದರಿ ರಸ್ತೆಯ ಅಗಲ 40 ಅಡಿ ಇದೆ. ಸದರಿ ರಸ್ತೆಯಲ್ಲಿ ಎರಡು ವಾಹನಗಳು ಸಂಚರಿಸುವ ರಸ್ತೆಯಾಗಿದೆ.

2. ಕೆಎ 03 ಎಂಎಕ್ಸ್ 9440 ನೊಂದಣಿ ಕಾರು ಅ ದಿನ ನನ್ನ ಎದುರುಗಡೆಯಿಂದ ಬರುತ್ತಿತ್ತು. ಅ ಸಮಯದಲ್ಲಿ ನನ್ನ ಬಲ ಮತ್ತು ಎಡ ಬಾಗದಲ್ಲಿ ವಾಹನಗಳು ಇದ್ದವು. ಎದುರುದಾರರ ಕಾರನ್ನು ನಾನು 10 ರಿಂದ 20 ಅಡಿ ದೂರದಲ್ಲಿ ನೋಡಿರುತ್ತೇನೆ. ಕಾರು ವೇಗವಾಗಿ ಬಂದ ಕಾರಣ ನನ್ನ ಗಾಡಿಯನ್ನು ಪಕ್ಕಕ್ಕೆ ನಿಲ್ಲಿಸಲು ನನಗೆ ಸಮಯ ಸಿಗಲಿಲ್ಲ. ಎದುರುದಾರರ ಕಾರು ನನ್ನ ವಾಹನದ ಮುಂಬಾಗಕ್ಕೆ ಡಿಕ್ಕಿ ಮಾಡಿತು. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ನನಗೆ ಪ್ರಜ್ಞೆ ಬಂದಂಾಗ ಕಮ್ಮನಹಳ್ಳಿಯ ಸ್ಪೆಷಲಿಸ್ಟ್ ಅಸ್ಪತ್ರೆಯಲ್ಲಿದ್ದೇನು. ಅಪಘಾತ ಸ್ಥಳದಲ್ಲಿ ಗಾಡಿ ಇತ್ತೋ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ನನಗೆ ಪ್ರಜ್ಞೆ ಇರದ ಕಾರಣ ಗೊತ್ತಾಗಲಿಲ್ಲ.

3. ಅಪಘಾತವಾದ ಮದಾ್ಯುಹ್ನ 1 ಗಂಟೆ ಸಮಯದಲ್ಲಿ ವೈಧ್ಯರು ಪೋಲೀಸರಿಗೆ ಮಾಹಿತಿಯನ್ನು ಕಳುಹಿಸಿದರು. ಎದುರುದಾರರ ಕಾರಿನವರೇ ನನ್ನನ್ನು ಅಸ್ಪತ್ರೆಗೆ ಕರೆದುಕೊಂಡು ಬಂದಿರೂತ್ತಾರೆಂದು ನನ್ನ ಅಣ್ಣ ನನಗೆ ಹೇಳಿದರು. ನನ್ನ ಅಣ್ಣ ಅಪಘಾತದ ಸಮಯದಲ್ಲಿ ನನ್ನ ಜೊತೆಗೆ ಇರಲಿಲ್ಲ. ಇಂತಹದೇ ಸ್ಥಳದಲ್ಲಿ ಅಪಘಾತವಾಗಿತ್ತು ಎಂದು ನಾನು ಪೋಲೀಸರಿಗೆ ಸ್ಥಳವನ್ನು ತೋರಿಸಿರುವುದಿಲ್ಲ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನದ ಮುಂದಿನ ಬಾಗ ಸಂಪೂರ್ಣ ಜಖಂ ಅಗಿತ್ತು ಎಂದರೆ ಸರಿ. ಅಸ್ಪತ್ರೆಯಲ್ಲಿ ವೈಧ್ಯರಿಗೆ ನನಗೆ ಗಾಯಗಳು ಯಾವ ರೀತಿ ಅಗಿರುತ್ತದೆ ಎನ್ನುವ ವಿಚಾರ ತಿಳಿಸಿರುತ್ತೇನೆ. ಅಸ್ಪತ್ರೆಯ ದಾಖಲೆಗಳಲ್ಲಿ ಇಂತಹದೇ ವಾಹನದಿಂದ ನನಗೆ ಅಪಘಾತ ಅಗಿರುತ್ತದೆ ಎನ್ನುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ನನಗೆ ಚಿಕಿತ್ಸೆ ನೀಡಿದ ವೈಧ್ಯರ ಹೆಸರು ಗೊತ್ತಿಲ್ಲ. ಅಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಾನು ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ 2 ಲಕ್ಷ

ಖರ್ಚಾಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ ರೂ 60 ಸಾವಿರ ಖರ್ಚಾಗುತ್ತದೆಂದು ವೈದ್ಯರು ಬರವಣಿಗೆಯ ಮೂಲಕ ನನಗೆ ತಿಳಿಸಿರುವುದಿಲ್ಲ. ಅದರೆ ಪುನಃ ಶಸ್ತ್ರ ಚಿಕಿತ್ಸೆ ಅಗಬೇಕೆಂದು ತಿಳಿಸಿರುತ್ತಾರೆ ಎನ್ನುತ್ತಾರೆ. ನಾನು ಮೊದಲಿನಂತೆ ಈಗಲೂ ಅರೋಗ್ಯವಂತನಾಗಿದ್ದೇನೆಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಮಾಂಸದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ನನಗೆ ದಿನಕ್ಕೆ ರೂ 1 ಸಾವಿರ ಅದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ನಿಪಿ9 ನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಔಷದಿಗಳ ಬಿಲ್ಲಿಗೆ ಸಂಬಂದಿಸಿದಂತೆ ಪೂರಕವಾದ ವೈದ್ಯರ ಸಲಹಾ ಚೀಟಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಬಳಿ ಡಿಎಲ್ ಇತ್ತು ಅದು ಅಪಘಾತದ ಸಮಯದಲ್ಲಿ ಕಳೆದುಹೋಗಿರುತ್ತದೆ. ಯಶವಂತಪುರ ಅರ್ ಟಿ ಒ ಬಳಿ ನಾನು ಡಿಎಲ್ ಮಾಡಿಸಿದ್ದೇನು. ಅಲ್ಲಿ ಹೋಗಿ ನನ್ನ ಡಿಎಲ್ ನ ಬಗ್ಗೆ ಕ ೇಳಿದಾಗ ಅದರ ಸಂಖ್ಯೆ ಬೇಕೆಂದು ತಿಳಿಸಿದ ಕಾರಣ ನನಗೆ ಪುನಃ ಡಿಎಲ್ ನೀಡಿರುವುದಿಲ್ಲ. ಅದಕ್ಕೆ ಸಂಬಂದಿಸಿದಂತೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅಪಘಾತದ ದಿನ ಡಿಎಲ್ ಇಲ್ಲದೇ ನಾನು ದ್ವಿಚಕ್ರ ವಾಹನವನ್ನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಒಡಿಸಿ ನಾನೇ ಸ್ವತಃ ಬಿದ್ದು ಗಾಯ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಪೋಲೀಸರು ಹಾಗೂ 2 ನೇ ಎದುರುದಾರರೊಂದಿಗೆ ಶಾಮೀಲಾಗಿ ಪರಿಹಾರ ಸಿಗಲೆಂದು ಸುಳ್ಳು ಆರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತಕ್ಕೂ 2 ನೇ ಎದುರುದಾರರ ಕಾರಿಗೂ ಯಾವುದೇ ಸಂಬಂದವಿರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಎದುರುದಾರರು ಏಕಪಕ್ಷಿಯವಾಗಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು